# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ಧಾಪುರ

**ಸಿ.ಸಿ. 195/2026**

ಫಿರ್ಯಾದಿಃ ಸುನೀಲ್ ನಾಯ್ಕ. ಎಸ್. ಎನ್
ಅಂದಾಜು ಪ್ರಾಯ 30 ವರ್ಷ,
ವಿಳಾಸಃ ಸಾಲೂರು, ಸಾಲೂರು ಅಂಚೆ,
ಶಿಕಾರಿಪುರ, ಶಿವಮೊಗ್ಗ ಜಿಲ್ಲೆ -577214.
ಹಾಲಿ ವಸತಿ ಆರ್. ಆರ್ ಶೇಟ ಬಿಲ್ಡಿಂಗ್.
ಕೆ.ಕೆ. ಶಾನಭಾಗ ಅಂಗಡಿಯ ಎದುರು,
ಮಾರುತಿ ನಗರ, ಹಾಳದಕಟ್ಟಾ,
ಸಿದ್ದಾಪುರ ತಾಲೂಕ (ಉ.ಕ.)-581355,

-ವಿರುದ್ಧ-

ಆರೋಪಿಃ ಗೀರಿಶ ನಾಯ್ಕ ಎಲ್
ಅಂದಾಜು ಪ್ರಾಯ 27 ವರ್ಷ,
ವಿಳಾಸಃ 034 ರಾಜಗೊಂಡನಹಳ್ಳಿ,
ಚನ್ನಗಿರಿ ತಾಃ ಚನ್ನಗಿರಿ.
ದಾವಣಗೆರೆ ಜಿಲ್ಲೆ -577213.

ನಾನು **ಶ್ರೀ. ಹರೀಶಕುಮಾರ್.ಎಮ್. ಬಿ.ಕಾಂ., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ಧಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

## ಆಪಾದನೆ

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಶಿವಮೊಗ್ಗಾ ಜಿಲ್ಲಾ ಶಿಕಾರಿಪುರ ತಾಲೂಕು ಸಾಲೂರು ಖಾಯಂ ನಿವಾಸಿ ಇದ್ದು ಹಾಲಿ ವಸತಿ ಆರ್. ಆರ್. ಶೇಟ ಬಿಲ್ಡಿಂಗ್ ಕೆ.ಕೆ.ಶಾನಭಾಗ ಅಂಗಡಿಯ ಎದುರು ಮಾರುತಿ ನಗರ ಹಾಳದಕಟ್ಟಾದಲ್ಲಿ ಇದ್ದು ಪಿರ್ಯಾದಿಯು ಪೋಲೀಸ್ ಇಲಾಖೆಯಲ್ಲಿ ಕಾನಸ್ಟೇಬಲ್ ಹುದ್ದೆಯಲ್ಲಿದ್ದು ಆರೋಪಿತನಾದ ನಿನಗೆ ಪರಿಚಯಸ್ಥರಾಗಿರುತ್ತಾರೆ. ಆರೋಪಿತನಾದ ನೀನು 2024 ನೇ ಇಸ್ವಿ ಮೇ ತಿಂಗಳಲ್ಲಿ ಪಿರ್ಯಾದಿಗೆ ಖಾಲಿ ನಿವೇಶನ ಕೊಡಿಸುವುದಾಗಿ ರೂ. 7,75,000/- ಹಣವನ್ನು ಪಡೆದಿದ್ದು

ನಿಗದಿತ ಅವಧಿಯ ಒಳಗೆ ನೀನು ಪಿರ್ಯಾದುದಾರನಿಗೆ ಯಾವುದೇ ನಿವೇಶನ ಕೊಡಿಸಿದ್ದು ಇರುವುದಿಲ್ಲಾ ಹಾಗೂ ಪಿರ್ಯಾದಿಯು ನಿನ್ನನ್ನು ಭೆಟ್ಟಿಯಾಗಿ ಹಣವನ್ನು ನೀಡುವಂತೆ ಕೇಳಲಾಗಿ, ನೀನು ನೀಡಬೇಕಾದ ಹಣವನ್ನು ಚೆಕ ಮೂಲಕ ಮರಳಿಸುವುದಾಗಿ ತಿಳಿಸಿ, ನಿನ್ನ ಖಾತೆ ಇರುವ ಕೆನರಾ ಬ್ಯಾಂಕ ದೇವರಹಳ್ಳಿ ಶಾಖೆಯ ದಿನಾಂಕ 06.03.2026 ರ ಚೆಕ್ಕಿನ ಸಂಖ್ಯೆ: 380230 ನ ರೂ.7,75,000/- ನ ಚೆಕನ್ನು ನೀಡಿದ್ದು, ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು SBI Bank,. ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ರುಜು ತಾಳೆಯಾಗದ ಕಾರಣ ದಿಃ 06.03.2026 ರಂದು "Drawers Signature differs" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 18.03.2026 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸು ದಿನಾಂಕ: 20.03.2026 ರಂದು ನೀನು ಸದರಿ ನೋಟಿಸ್ಸನ್ನು ಪಡೆದಿದ್ದರು ಸಹ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ದ ವಿಚಾರಣೆ ನಡೆಯಬೇಕೆ?

**ಉತ್ತರಃ**

**ಪ್ರಶ್ನೆಃ 3** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 380230 ನಿಮ್ಮ Canara Bank ಖಾತಾ ನಂ. 19122210022749 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 4** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 380230 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 5** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 380230 ನ್ನು ಪಿರ್ಯಾದುದಾರರಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 6** ಪಿರ್ಯಾದುದಾರರಿಂದ 2024 ನೇ ಇಸ್ವಿ ಮೇ ತಿಂಗಳಲ್ಲಿ ರೂ.7,75,000/- ಹಣವನ್ನು ನಿವೇಶನ ಕೊಡಿಸುವುದಾಗಿ ಪಡೆದಿರುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 380230 ದಿನಾಂಕ 06.03.2026 ರಲ್ಲಿ ನಮೂದಿಸಿದ ರೂ.7,75,000/- ನ್ನು ( ಏಳು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಪಿರ್ಯಾದುದಾರರಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಛಿಸುವಿರಾ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **06-08-2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**